# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 943 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು ) |
| ಉತ್ತರಿಸುವ ಸಚಿವರು | : | ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 17.12.2024 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಡಿಕೆ ಬೆಳೆ ಉತ್ತೇಜನ ಮತ್ತು ಮಾರುಕಟ್ಟೆಯನ್ನು ಒದಗಿಸಲು ಅಡಿಕೆ ಬೆಳೆಗಾರರ ನಿಗಮ ಸ್ಥಾಪಿಸಬೇಕೆಂಬ ಬೇಡಿಕೆ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆಯೇ; (ವಿವರ ನೀಡುವುದು) | ರಾಜ್ಯದಲ್ಲಿ ಅಡಿಕೆ ಬೆಳೆ ಉತ್ತೇಜನ ಮತ್ತು ಮಾರುಕಟ್ಟೆಯನ್ನು ಒದಗಿಸಲು ಅಡಿಕೆ ಬೆಳೆಗಾರರ ನಿಗಮ ಸ್ಥಾಪಿಸಬೇಕೆಂಬ ಬೇಡಿಕೆ ಬಗ್ಗೆ ತೋಟಗಾರಿಕೆ ಇಲಾಖೆಯು ಈ ಕೆಳಕಂಡಂತೆ ಕ್ರಮ ಕೈಗೊಂಡಿರುತ್ತದೆ:-<br><br>ಅಡಿಕೆ ಬೆಳೆ ಉತ್ತೇಜನ ಮತ್ತು ಮಾರುಕಟ್ಟೆಯನ್ನು ಒದಗಿಸಲು ಅಡಕೆ ಬೆಳೆಗಾರರ ನಿಗಮ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ದಿನಂಕ:12.12.2019 ರಂದು ಮನವಿ ಸಲ್ಲಿಸಲಾಗಿತ್ತು.<br><br>ಹಲವಾರು ಸರ್ಕಾರಿ ಸಂಸ್ಥೆಗಳಾದ CPCRI (Central Plantation Crops Research Institute), ಕಾಸರಗೋಡು, ಅಡಕೆ ಮತ್ತು ಸಾಂಬಾರು ಬೆಳೆಗಳ ಅಭಿವೃದ್ಧಿ ನಿರ್ದೇಶನಾಲಯ (DASD), Calicut, ಕೇರಳ, Central Arecanut and Cocoa marketing and processing Co-operative Ltd, ಮಂಗಳೂರು ಸಂಸ್ಥೆಗಳು ಅಡಿಕೆ ಬೇಸಾಯವನ್ನು ಪ್ರೋತ್ಸಾಹಿಸಿ ಸಂರಕ್ಷಿಸಲು ಕ್ರಮ ಕೈಗೊಳ್ಳುತ್ತಿರುವುದರಿಂದ ಮತ್ತೊಂದು ಹೊಸ ಸಂಸ್ಥೆಯನ್ನು ರಚಿಸುವುದು ಅನಗತ್ಯವೆಂದು ಕೇಂದ್ರ ಸರ್ಕಾರ ತಿಳಿಸಿರುತ್ತದೆ. |

| | | |
|---|---|---|
| ಆ) | ಅಡಿಕೆ ಬೆಳೆಗಾರರು ಹವಾಮಾನ ವೈಪರೀತ್ಯದಿಂದ ಕೊಳೆ ರೋಗಕ್ಕೆ ತುತ್ತಾದಾಗ ಅದಕ್ಕೆ ಸಹಾಯಕ್ಕೆ ಬರಲು ಅವರ್ತ ನಿಧಿಯೊಂದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವುದೇ; | ಇಲ್ಲ |
| ಇ) | ತೋಟಗಾರಿಕಾ ಇಲಾಖೆಯಿಂದ ಅಡಿಕೆ ಬೆಳೆಗಾರರಿಗೆ ಉತ್ತೇಜನ ನೀಡಲು ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು) | **ತೋಟಗಾರಿಕೆ ಇಲಾಖೆಯಿಂದ ಅಡಿಕೆ ಬೆಳೆಗಾರರಿಗೆ ಉತ್ತೇಜನ ನೀಡಲು ಕೈಗೊಂಡಿರುವ ಕ್ರಮಗಳು ಕೆಳಗಿನಂತಿವೆ:-**<br><br>**1. ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ:**<br><br>ಪ್ರತಿ ಹನಿಗೆ ಅಧಿಕ ಬೆಳೆ ಕಾರ್ಯಕ್ರಮದಡಿಯಲ್ಲಿ ಹನಿ ನೀರಾವರಿ ಹಾಗೂ ತುಂತುರು ನೀರಾವರಿ ಘಟಕ ಅಳವಡಿಸಿಕೊಳ್ಳಲು ಪ್ರಸಕ್ತ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಒಳಪಡುವ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಅಡಿಕೆ ಬೆಳೆಗೆ ಗರಿಷ್ಟ 2 ಹೆಕ್ಟರ್ ಪ್ರದೇಶದವರೆಗೆ ಎಲ್ಲಾ ವರ್ಗದ ರೈತರಿಗೆ ಶೇ.90 ರಷ್ಟು ಸಹಾಯಧನ ನೀಡಲಾಗುತ್ತಿದೆ. ನಂತರದ 2 ಹೆಕ್ಟರ್ ರಿಂದ 5 ಹೆಕ್ಟರ್ ಪ್ರದೇಶದವರೆಗೆ ಶೇ.45 ರಷ್ಟು ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯಡಿ 22,324.42 ಹೆಕ್ಟೇರ್ ಪ್ರದೇಶಕ್ಕೆ 24,659 ಫಲಾನುಭವಿಗಳಿಗೆ ರೂ.15,525.78 ಲಕ್ಷಗಳನ್ನು ವಿನಿಯೋಗಿಸಲಾಗಿದೆ.<br><br>2. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅರ್ಹ ಫಲಾನುಭವಿಗಳಿಗೆ ಅಡಿಕೆ ಬೆಳೆಯ ಪ್ರದೇಶ ವಿಸ್ತರಣೆ ಕಾರ್ಯಕ್ರಮಕ್ಕೆ ಅಂದಾಜು ಪ್ರತಿ ಹೆಕ್ಟೇರ್ ಗೆ ಒಟ್ಟು ರೂ.1,80,178 (ಕೂಲಿ ವೆಚ್ಚ ರೂ.1,49,494 ಹಾಗೂ ಸಾಮಾಗ್ರಿ ವೆಚ್ಚ ರೂ.30,684) ಸಹಾಯಧನ ಸೌಲಭ್ಯವನ್ನು ಸಾಂಪ್ರದಾಯಿಕ ಅಡಿಕೆ ಬೆಳೆಯುವ ಕರಾವಳಿ ಮತ್ತು ಮಲೆನಾಡು ಪ್ರದೇಶಗಳಲ್ಲಿ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯಡಿ 3,865 ಹೆಕ್ಟೇರ್ ಪ್ರದೇಶಕ್ಕೆ 10,944 |

| | | |
|---|---|---|
| | | ಫಲಾನುಭವಿಗಳಿಗೆ ರೂ.676.3 ಲಕ್ಷಗಳನ್ನು ವಿನಿಯೋಗಿಸಲಾಗಿದೆ.<br><br>3. ಅಡಿಕೆ ಮರಗಳಲ್ಲಿ ಸಸ್ಯ ಸಂರಕ್ಷಣಾ ಔಷಧಿ ಸಿಂಪಡಣೆಗೆ ಹಾಗೂ ಕಟಾವು ಮಾಡಲು ಟ್ರೀ ಪ್ರೂನರ್/ಟೆಲಿಸ್ಕೋಪಿಕ್ ಪ್ರೂನರ್, ಅಡಿಕೆ ಕೊಯ್ಲು ಮಾಡುವ ಉಪಕರಣ, ಅಡಕೆ ಸಿಪ್ಪೆ ಸುಲಿಯುವ ಯಂತ್ರ, ಕಾರ್ಬನ್ ಫೈಬರ್ ದೋಟಿ ಖರೀದಿಸಲು ತೋಟಗಾರಿಕೆಯ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇಕಡಾ 40 ರಂತೆ ರೂ.40,000/- ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇಕಡಾ 50 ರಂತೆ ರೂ.50,000/- ಸಹಾಯಧನ ನೀಡಲಾಗುತ್ತಿದೆ.<br><br>4. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ ಉಪ ಕಾರ್ಯಕ್ರಮವಾದ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆ ಘಟಕ ವೆಚ್ಚ ರೂ.4,000 ಗಳಾಗಿದ್ದು, ಇದರಲ್ಲಿ ಶೇ.30 ರಂತೆ, ಪ್ರತಿ ಹೆಕ್ಟೇರ್ ಗೆ ರೂ.1,200 ಗಳಂತೆ ಗರಿಷ್ಠ 4 ಹೆಕ್ಟೇರ್ ವರೆಗೆ ರೂ.4,800 ಗಳ ಸಹಾಯಧನ ನೀಡಲಾಗುತ್ತಿದೆ.<br><br>5. ಪ್ರತಿಕೂಲ ಹವಮಾನ ವೈಪರಿತ್ಯಗಳಿಂದ ಬೆಳೆ ನಷ್ಟವಾಗುವ ಸಂಭವನೀಯ ಬೆಳೆಗಳಿಗೆ ರೈತರನ್ನು ಬೆಂಬಲಿಸಲು ಮರು ವಿನ್ಯಾಸಗೊಳಿಸಿದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆಯಡಿಯಲ್ಲಿ ಪ್ರಮುಖ ಅಡಕೆ ಬೆಳೆಯುವ ಜಿಲ್ಲೆಗಳಾದ ಚಿಕ್ಕಮಗಳೂರು, ಚಿತ್ರದುರ್ಗ, ದಕ್ಷಿಣ ಕನ್ನಡ, ಹಾವೇರಿ, ಕೊಡಗು, ಶಿವಮೊಗ್ಗ, ಉತ್ತರ ಕನ್ನಡ, ವಿಜಯನಗರ, ದಾವಣಗೆರೆ, ಉಡುಪಿ, ಹಾಸನ, ಹಾಗೂ ತುಮಕೂರು ಜಿಲ್ಲೆಗಳಲ್ಲಿ ವಿಮಾ ಸೌಲಭ್ಯವನ್ನು ಕಲ್ಪಿಸಲಾಗಿದ್ದು, ಪ್ರತಿ ಹೆಕ್ಟೇರ್ ಗೆ ಒಟ್ಟು ವಿಮಾ ಮೊತ್ತ ರೂ.1,28,000 ಗಳಾಗಿದೆ. ರೈತರ ವಂತಿಕೆ ಶೇ. 5 ರಂತೆ ರೂ.6,400 ಗಳಾಗಿದೆ. |

| | | |
|---|---|---|
| | | 6. ಅಡಕೆ ಎಲೆಚುಕ್ಕೆ ರೋಗ ಹಾಗೂ ಹಳದಿ ಎಲೆ ರೋಗಗಳ ನಿಯಂತ್ರಣಕ್ಕಾಗಿ ಕೇಂದ್ರ ಸರ್ಕಾರ ನೇಮಿಸಿರುವ ವೈಜ್ಞಾನಿಕ ತಂಡದ ಸಮಿತಿಯು ರೋಗ ಬಾಧಿತ ಜಿಲ್ಲೆಗಳಾದ ಚಿಕ್ಕಮಗಳೂರು, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಭೇಟಿ ನೀಡಿ ಎಲೆ ಚುಕ್ಕೆ ರೋಗದ ಹರಡುವಿಕೆಗೆ ಪ್ರಮುಖ ಕಾರಣಗಳು, ರೋಗದ ತೀವ್ರತೆ ಮತ್ತು ಹಾನಿಯ ಪ್ರಮಾಣದ ಬಗ್ಗೆ ಪರಿಶೀಲಿಸಿ ಶಿಫಾರಸ್ಸಿನಂತೆ ಫೈಟೋಸ್ಯಾನಿಟರಿ ಕ್ರಮಗಳ ಅಳವಡಿಕೆ (ರೋಗ ಬಾಧಿತ ಸಸ್ಯದ ಭಾಗಗಳನ್ನು ತೆಗೆಯುವುದು ಮತ್ತು ನಾಶಪಡಿಸುವುದು), ಪೋಷಕಾಂಶಗಳ ನಿರ್ವಹಣೆ, ಸಸ್ಯ ಸಂರಕ್ಷಣೆ ಕ್ರಮಗಳ ಅಳವಡಿಕೆ ಹಾಗೂ ತಾಂತ್ರಿಕ ಮಾಹಿತಿ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳಿಗೆ ಎಲೆ ಚುಕ್ಕೆ ರೋಗದಿಂದ ಹಾನಿಯಾಗಿರುವ ಅಂದಾಜು 54,000 ಹೆಕ್ಟೇರ್ ಪ್ರದೇಶಕ್ಕೆ ರೂ.225.73 ಕೋಟಿಗಳಿಗೆ ಪ್ರಸ್ತಾವನೆ ಸಿದ್ಧಪಡಿಸಿ ಕೇಂದ್ರಿಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ(CPCRI)ರವರ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.<br><br>7. ಈ ರೋಗಗಳ ನಿಯಂತ್ರಣದ ಕುರಿತು ಸಂಶೋಧನೆ ಕೈಗೊಳ್ಳಲು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ರವರು ರೂಪಿಸಿರುವ ರೂ.775 ಲಕ್ಷಗಳ ಪ್ರಸ್ತಾವನೆಯನ್ನು ನಬಾರ್ಡ್ ನೆರವಿನ RIDF TRANCH-30 ರಡಿ ಒದಗಿಸಲು ಆರ್ಥಿಕ ಇಲಾಖೆಗೆ ಸಲ್ಲಿಸಲಾಗಿದೆ ಹಾಗೂ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯ MIDH ನ ‘INNOVATIVE RESEARCH COMPONENT” ಅಡಿಯಲ್ಲಿ ರೂ. 689 ಲಕ್ಷಗಳಿಗೆ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮೋದನೆ ನಿರೀಕ್ಷಿಸಲಾಗಿದೆ.<br><br>8. 2022-23 ನೇ ಸಾಲಿನಲ್ಲಿ ಅಡಕೆ ಹಳದಿ |

| | | |
|---|---|---|
| | | ಎಲೆ ರೋಗ ಬಾಧೆಗೆ ನಿರ್ಧಿಷ್ಟವಾದ ಕಾರಣಗಳನ್ನು ಕಂಡು ಹಿಡಿಯಲು ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಕೇಂದ್ರ (CPCRI) ವಿಟ್ಲ, ದಕ್ಷಿಣ ಕನ್ನಡ ರವರಿಗೆ ರೂ.50.00 ಲಕ್ಷಗಳ ಅನುದಾನ ಒದಗಿಸಿದ್ದು, ಸಂಶೋಧನೆ ಪ್ರಗತಿಯಲ್ಲಿರುತ್ತದೆ.<br><br>9. 2023-24ನೇ ಸಾಲಿನಲ್ಲಿ ಅಡಿಕೆ ಎಲೆಚುಕ್ಕೆ ರೋಗ ಭಾದಿತ ರೈತರಿಗೆ ಪ್ರತಿ ಹೆಕ್ಟೇರ್‌ಗೆ ರೂ.4,000.00 ಗಳಂತೆ 1.5 ಹೆಕ್ಟೇರ್ ವರೆಗೆ ಪ್ರತಿ ಫಲಾನುಭವಿಗೆ ಗರಿಷ್ಠ ರೂ.6,000/- ಗಳ ಮೊತ್ತದ ಸಸ್ಯ ಸಂರಕ್ಷಣಾ ಔಷಧಿಗಳನ್ನು ವಿತರಿಸಲಾಗಿದೆ. 6,250 ಹೆಕ್ಟೇರ್ ಪ್ರದೇಶಕ್ಕೆ ರೂ.250.00 ಲಕ್ಷಗಳ ಅನುದಾನವನ್ನು ವಿನಿಯೋಗಿಸಲಾಗಿದೆ.<br><br>10. 2023-24 ನೇ ಸಾಲಿನಲ್ಲಿ ಅಡಿಕೆ ಎಲೆ ಚುಕ್ಕೆ ರೋಗದ ನಿಯಂತ್ರಣ ಕುರಿತು ಸಂಶೋಧನೆ ಕೈಗೊಳ್ಳಲು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ ರವರಿಗೆ ರೂ.43.61 ಲಕ್ಷಗಳ ಅನುದಾನವನ್ನು ನೀಡಲಾಗಿದ್ದು, ಸಂಶೋಧನೆಯು ಪ್ರಗತಿಯಲ್ಲಿರುತ್ತದೆ.<br><br>11. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಅಡಿಕೆ ಹಳದಿ ಎಲೆ ರೋಗ ಬಾಧಿತ ಪ್ರದೇಶಗಳಲ್ಲಿ ಅಡಿಕೆ ಬೆಳೆಯ ಬದಲಾಗಿ ಇತರೆ ವಾಣಿಜ್ಯ ತೋಟಗಾರಿಕೆ ಬೆಳೆಗಳಾದ ಬಾಳೆ, ತೆಂಗು, ಕಾಫಿ, ಕೋಕೋ, ಕಾಳು ಮೆಣಸು, ಜಾಯಿಕಾಯಿ, ಬೆಣ್ಣೆ ಹಣ್ಣು ಹಾಗೂ ಇತರೆ ಬೆಳೆಗಳನ್ನು ಬೆಳೆಯಲು ಆಯಾ ಬೆಳೆಗೆ ಅನುಗುಣವಾಗಿ ಶೇ.40 ರಷ್ಟು ಪ್ರತಿ ಹೆಕ್ಟೇರ್ ಗೆ ರೂ.11,952 ರಿಂದ ರೂ.1,23,483 ರವರೆಗೆ ಸಹಾಯಧನವನ್ನು 4.00 ಹೆಕ್ಟೇರ್ ವರೆಗೆ ನೀಡಲಾಗುತ್ತಿದ್ದು, 2023-24 ನೇ ಸಾಲಿನಲ್ಲಿ 811.11 ಹೆಕ್ಟೇರ್ ಪ್ರದೇಶದ ನಿರ್ವಹಣೆಗೆ 731 ಫಲಾನುಭವಿಗಳಿಗೆ ರೂ.149.30 ಲಕ್ಷಗಳ ಸಹಾಯಧನ ನೀಡಲಾಗಿರುತ್ತದೆ. |

| | | |
|---|---|---|
| | | 12. ಇಲಾಖಾ ವತಿಯಿಂದ ಅಡಿಕೆ ತೋಟಗಳ ಪೋಷಕಾಂಶ ನಿರ್ವಹಣೆ, ಬಸಿ ಕಾಲುವೆಗಳನ್ನು ಮಾಡುವುದು, ಹಸಿರೆಲೆ ಗೊಬ್ಬರದ ಬಳಕೆ ಹಾಗೂ ರಸ ಗೊಬ್ಬರಗಳ ಪೂರೈಕೆಗಳ ಕುರಿತು ವಿಶ್ವವಿದ್ಯಾಲಯದ ತಜ್ಞರು ಹಾಗೂ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಕೈಪಿಡಿ, ಕರಪತ್ರುಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ ಹಾಗೂ ತರಬೇತಿ/ಕಾರ್ಯಾಗಾರಗಳ ಮೂಲಕ ರೈತರಿಗೆ ಅರಿವು ಮೂಡಿಸಲಾಗಿದೆ. |
| ಈ) | ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಅಡಿಕೆ ಬೆಳೆಗಳನ್ನು ಬೆಳೆಸಲಾಗುತ್ತದೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಅಡಿಕೆ ಬೆಳೆಯುವ ಜಿಲ್ಲೆಗಳ ವಿವರ **ಅನುಬಂಧದಲ್ಲಿ** ಒದಗಿಸಲಾಗಿದೆ. |
| ಉ) | ಅಡಿಕೆ ಬಳಕೆಯಿಂದ ಕ್ಯಾನ್ಸರ್ ರೋಗ ಬರುತ್ತದೆ ಎಂದು WHO ನೀಡಿರುವ ಹೇಳಿಕೆಗೆ ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮವೇನು? (ವಿವರ ನೀಡುವುದು) | ಅಡಿಕೆ ಔಷಧೀಯ ಗುಣಗಳ ಬಗ್ಗೆ ದಾಖಲೆ ಆಧಾರದಲ್ಲಿ ತಿಳಿಸಲು ತೋಟಗಾರಿಕೆ ಇಲಾಖೆ ವತಿಯಿಂದ ಎಂ.ಎಸ್. ರಾಮಯ್ಯ ಬೆಂಗಳೂರು ಸಂಸ್ಥೆಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗುತ್ತಿದೆ. ಈ ಉದ್ದೇಶಕ್ಕಾಗಿ ಎಂ.ಎಸ್.ರಾಮಯ್ಯ ವಿಶ್ವ ವಿದ್ಯಾನಿಲಯರವರು ನೀಡಿರುವ ಮಧ್ಯಂತರ ವರದಿಯಲ್ಲಿ ಕೆಳಕಾಣಿಸಿದ ಅಂಶಗಳನ್ನು ತಿಳಿಸಿರುತ್ತಾರೆ:-<br><br>a) ಅಡಿಕೆಯು ಕ್ಯಾನ್ಸರ್ ಕಾರಕವಲ್ಲ ಎಂಬ ವಿಷಯದ ಬಗ್ಗೆ ವರದಿ ನೀಡಲಾಗಿದೆ.<br>b) ಅಡಿಕೆಯನ್ನು ತಂಬಾಕು ಅಥವಾ ಪಾನ್ ಮಸಾಲಗಳೊಂದಿಗೆ ಬಳಸದೆ ಇದ್ದಲ್ಲಿ ಹಾಗೂ ಮಿತ ಹಿತ ಪ್ರಮಾಣದಲ್ಲಿ ಸೇವನೆ ಮಾಡಿದ್ದಲ್ಲಿ ಅಪಾಯಕಾರಿ ಯಲ್ಲವೆಂಬುದು ವರದಿಯಾಗಿದೆ.<br>c) ತೋಟಗಾರಿಕೆ ಇಲಾಖೆಯಿಂದ ಸಂಶೋಧನೆಗಾಗಿ ರೂ. 31.80 ಲಕ್ಷಗಳ ಅನುದಾನ ನಿಗದಿಪಡಿಸಲಾಗಿದೆ. |

**HORTI 544 HGM 2024(E)**

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು**

## ಅಡಕೆ ಬೆಳೆಯ ವಿಸ್ತೀರ್ಣ ( ಅನುಬಂಧ)

| ಕ್ರ.ಸಂ. | ಜಿಲ್ಲೆಗಳು Districts | 2022-23 | |
|---|---|---|---|
| | | ಅಡಕೆ (Arecanut) | |
| | | ವಿಸ್ತೀರ್ಣ Area | ಉತ್ಪನ್ನ Production |
| 1. | ಬೆಂಗಳೂರು (ನ) B'lore (U) | 919 | 1312 |
| 2. | ಬೆಂಗಳೂರು (ಗ್ರಾ) B'lore (R) | 4111 | 7399 |
| 3. | ಚಿಕ್ಕಬಳ್ಳಾಪುರ Chikkaballapura | 764 | 1168 |
| 4. | ಚಿತ್ರದುರ್ಗ Chitradurga | 53687 | 96637 |
| 5. | ದಾವಣಗೆರೆ Davangere | 84785 | 120257 |
| 6. | ಕೋಲಾರ Kolar | 15 | 29 |
| 7. | ರಾಮನಗರ Ramanagara | 3837 | 4924 |
| 8. | ಶಿವಮೊಗ್ಗ Shimoga | 121261 | 191638 |
| 9. | ತುಮಕೂರು Tumakuru | 87727 | 112071 |
| 10. | ಬಾಗಲಕೋಟೆ Bagalkote | 1 | 2 |
| 11. | ಬೆಳಗಾವಿ Belagavi | 40 | 80 |
| 12. | ಧಾರವಾಡ Dharwad | 189 | 278 |
| 13. | ಗದಗ Gadag | 148 | 202 |
| 14. | ಹಾವೇರಿ Haveri | 17418 | 21773 |
| 15. | ಉತ್ತರ ಕನ್ನಡ U.Kannada | 35219 | 91041 |
| 16. | ಬಳ್ಳಾರಿ Ballari | 137 | 171 |
| 17. | ಕೊಪ್ಪಳ Koppal | 11 | 15 |
| 18. | ಚಾಮರಾಜನಗರ Chamarajanagara | 1359 | 1698 |
| 19. | ಚಿಕ್ಕಮಗಳೂರು Chikmagalore | 85579 | 124158 |
| 20. | ದಕ್ಷಿಣ ಕನ್ನಡ D. Kannada | 109669 | 147339 |
| 21. | ಹಾಸನ Hassan | 16198 | 21057 |

| | | | |
|---|---|---|---|
| 22. | ಕೊಡಗು Kodagu | 29450 | 46227 |
| 23. | ಮಂಡ್ಯ Mandya | 4447 | 5692 |
| 24. | ಮೈಸೂರು Mysuru | 5918 | 7806 |
| 25. | ಉಡುಪಿ Udupi | 23520 | 39901 |
| 26. | ವಿಜಯನಗರ Vijayanagara | 2664 | 3711 |
| | **ಒಟ್ಟು** | **689073** | **1046586** |